ದಿನಾಂಕಃ **04.06.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ ಇ ಎನ್ ವಕೀಲರಿಂದಃ-

ದಾವಾ ಆಸ್ತಿಯು ನನ್ನ ತಂದೆ ಮೂಲಕ ನನಗೆ ಬಂದಿರುತ್ತದೆ. ದಾವಾ ಆಸ್ತಿಯು ನನ್ನ ತಂದೆಗೆ ಬೋರಣ್ಣ ರವರಿಂದ ವ್ಯವಸ್ಥಾ ಪತ್ರದ ಮೂಲಕ ಬಂದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮೂಲ ದಾಖಲೆ ನಶಿಸಿ ಹೋಗಿರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ಃ ಗಜೇಂದ್ರ, ಪರಣ್ಣ ರವರ ನಿವೇಶನ, ಪಶ್ಚಿಮಕ್ಕೆ ಃ ರಸ್ತೆ, ಉತ್ತರಕ್ಕೆ ಃ ಚಿಕ್ಕಮ್ಮ ರವರ ಹಿತ್ತಲು. ಸದರಿ ಚಿಕ್ಕಮ್ಮ ರವರು ಎಸ್ ಟಿ ಪದ್ಮನಾಭ ರವರ ತಾಯಿ ಎಂದರೆ ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ಃ ಚಂದ್ರಶೇಖರ್, ಗಂಗಾಧರ್ ರವರ ಮನೆ. ಚಂದ್ರಶೇಖರ್ ರವರ ತಾಯಿ ಹೆಸರು ಕಾವೇರಮ್ಮ. ಅವರ ಅಜ್ಜಿ ಹೆಸರು ನನಗೆ ಗೊತ್ತಿಲ್ಲ. ಅವರ ಅಜ್ಜಿ ಹೆಸರು ಹುಚ್ಚಮ್ಮ ಎಂದರೆ ಗೊತ್ತಿಲ್ಲ. ಚಂದ್ರಶೇಖರ್ ರವರು ತಮಗೆ ಸೇರಿದ ಆಸ್ತಿಯನ್ನು ಮಲ್ಲೇಶ್ ರವರಿಗೆ ಕಳೆದ ವರ್ಷ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗೆ ನೀವು ಇ ಸ್ವತ್ತು ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ಇ ಸ್ವತ್ತು ಮಾಡಿಸಲು ಹೋದಾಗ ಗಜೇಂದ್ರ ರವರಿಗೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದು ದಾಖಲೆ ಸೃಷ್ಟಿಸಿ ಗಲಾಟೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ನಾನು ಕಂದಾಯ ಪಾವತಿ ಮಾಡಿರುತ್ತೇನೆ, ಅದರ ದಾಖಲೆ ಹಾಜರುಪಡಿಸಿರುತ್ತೇನೆ. ವಿದ್ಯುತ್ ಬಿಲ್ ಪಾವತಿಸಿರುತ್ತೀರಾ ಎಂದರೆ ಸಾಕ್ಷಿ ಮಳೆಗೆ ಮನೆ ಬಿದ್ದು ಹೋಗಿರುವ ಕಾರಣ ವಿದ್ಯುತ್ ಬಿಲ್ ಪಾವತಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಮನೆಯು 2-3 ವರ್ಷದ ಹಿಂದೆ ಬಿದ್ದು ಹೋಗಿರುತ್ತದೆ. ಮನೆ ಬಿದ್ದು ಹೋದ ನಂತರ ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸಲು ಅರ್ಜಿ ನೀಡಿರುವುದಿಲ್ಲ. 2-3 ವರ್ಷದ ಹಿಂದಿನ ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ.

ನಾನು 2023 ರಲ್ಲಿ ಹೊಸ ಮನೆಯನ್ನು ಕಟ್ಟಿ ಅಲ್ಲಿಗೆ ಹೋಗಿರುತ್ತೇನೆ. ದಾವಾ ಆಸ್ತಿಯು ದೊಡ್ಡಹಟ್ಟಿ ಗ್ರಾಮದಲ್ಲಿರುತ್ತದೆ ಎಂದರೆ ಸರಿ. ದೊಡ್ಡಹಟ್ಟಿಯು ಸಖರಾಯಪಟ್ಟಣದ ಹಾಲಸ್ವಾಮಿ ರಸ್ತೆಯಲ್ಲಿರುತ್ತದೆ. ಹಗಲೇರಿ ಬಡಾವಣೆಗೆ ದಾವಾ ಆಸ್ತಿಯಿಂದ ಅರ್ಧ ಕಿಮಿ ಅಂತರದಲ್ಲಿರುತ್ತದೆ. ಹಗಲೇರಿ ಬಡಾವಣೆಯು ಊರುಗಾಲುವೆಯು ದಡದಲ್ಲಿರುತ್ತದೆ ಎಂದರೆ ಸರಿ. 37 x 34 ರ ನಿವೇಶನದಲ್ಲಿ ಹಾಗೂ 18 x 26 ರ ಮನೆಯು ಇಲ್ಲಾ ಎಂದರೆ ಸರಿಯಲ್ಲ. ನಾನು ತಪ್ಪಾದ ವಿಸ್ತೀರ್ಣವನ್ನು ನಮೂದಿಸಿ ಈ ನ್ಯಾಯಾಲಯದಲ್ಲಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ದಿಃ 17.02.1959 ರಲ್ಲಿ ನನ್ನ ತಂದೆಗೆ ವ್ಯವಸ್ಥಾ ಪತ್ರದ ಮೂಲಕ ಬಂದ ಆಸ್ತಿ ಎಂದರೆ ಗೊತ್ತಿಲ್ಲ. ಅದರ ವಿಸ್ತೀರ್ಣ 117 x 28 ಎಂದರೆ ಆ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲಾ ಎಂದು ನುಡಿಯುತ್ತಾರೆ. ವ್ಯವಸ್ಥಾ ಪತ್ರದ ಮೂಲಕ ಬಂದ ಮನೆಯ ವಿಸ್ತೀರ್ಣ 18 x 22 ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ವ್ಯವಸ್ಥಾ ಪತ್ರದ ಮೂಲಕ ಬಂದ ಅಸ್ತಿಯನ್ನು ದಿಃ 25.01.1985 ರಲ್ಲಿ ಪ್ರತಿವಾದಿಯ ತಂದೆ ಚೌಡಪ್ಪ

ನವರಿಗೆ ನನ್ನ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ನಾನು ಮತ್ತು ನನ್ನ ತಂದೆ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಹಗಳೇರಿಯ ಮನೆಯಲ್ಲಿ ನಾನು ಸುಮಾರು 6-7 ವರ್ಷ ವಾಸವಿದ್ದೆ. ನಾನು ಮತ್ತು ನನ್ನ ಹೆಂಡತಿ ಮಾತ್ರ 2022-23 ರವರೆಗೂ ವಾಸವಾಗಿದ್ದೆವು. ಈಗ ಸದರಿ ಮನೆಯನ್ನು ಶಂಕ್ರಪ್ಪ ರವರಿಗೆ ಮಾರಾಟ ಮಾಡಿರುತ್ತೇನೆ. ದಾವಾ ಆಸ್ತಿಯನ್ನು ನನ್ನ ತಂದೆ ಮಾರಾಟ ಮಾಡಿದ ನಂತರ ನಾನಾಗಲೀ ನನ್ನ ತಂದೆ ತಾಯಿಯಾಗಲೀ ದಾವಾ ಆಸ್ತಿಯಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಹೂಡುವ ಸಮಯದಲ್ಲಿ ನನ್ನ ತಂದೆ ಜೀವಂತವಾಗಿದ್ದು ಅವರು ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರವನ್ನು ನಿಮಗೆ ಹೇಳಿರುತ್ತಾರಾ ಎಂದರೆ ಸಾಕ್ಷಿ ನನ್ನ ತಂದೆಯವರು ದಾವಾ ಆಸ್ತಿಯನ್ನು ಯಾವತ್ತೂ ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವೆ ಹೂಡಲು ಮಾಹಿತಿಯನ್ನು ನನ್ನ ತಂದೆಯವರು ನೀಡಿರುತ್ತಾರೆ. ದಾವಾ ಆಸ್ತಿಯ ಚಕ್ಕುಬಂಧಿ, ಕ್ರಯಪತ್ರದ ಚಕ್ಕುಬಂಧಿ, ವ್ಯವಸ್ಥಾ ಪತ್ರದ ಚಕ್ಕುಬಂಧಿ, ಇ ಸ್ವತ್ತಿನಲ್ಲಿರುವ ಚಕ್ಕುಬಂಧಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಅಸ್ತಿಯಲ್ಲಿ ನಾನು ವಾಸವಿದ್ದ ಮನೆಯ ಛಾಯಾಚಿತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಹೂಡವ ಪೂರ್ವದಲ್ಲಿ ಮನೆ ಬಿದ್ದು ಹೋಗಿರುತ್ತದೆ. ದಾವಾ ಆಸ್ತಿಯಲ್ಲಿ ವಾಸವಿದ್ದ ಬಗ್ಗೆ ವಾಸ ಸ್ಥಳ ಧೃಡೀಕರಣ ಪತ್ರವನ್ನು ಹಾಜರುಪಡಿಸಬಹುದು. 2024 ರಲ್ಲಿ ನಾನು ಎಲ್ಲಿ ವಾಸವಾಗಿದ್ದೆ ಎಂದು ತೋರಿಸಲು ಮತದಾರರ ಪಟ್ಟಿಯನ್ನು ಹಾಜರುಪಡಿಸಬಹುದು.

**( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-

**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.